## ಕರ್ನಾಟಕ ಲೋಕಸೇವಾ ಆಯೋಗ

**"ಉದ್ಯೋಗ ಸೌಧ" ಬೆಂಗಳೂರು-560 001.**

**ಸಂಖ್ಯೆ: ಪಿಎಸ್ ಸಿ/ 2441/ಇ(1) /2024-25** **ದಿನಾಂಕ:20-01-2025**

### ತಿದ್ದುಪಡಿ ಅಧಿಸೂಚನೆ

**ಉಲ್ಲೇಖ:**ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ /1640/ ಇ(1)/2024-25, ದಿನಾಂಕ:18-09-2024,

* * * * *

ಆಯೋಗವು ಲೋಕೋಪಯೋಗಿ ಇಲಾಖೆಯಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೇಡ್-1) ಗ್ರೂಪ್ 'ಎ' ವೃಂದದ 30 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಉಲ್ಲೇಖಿತ ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ/1640/ಇ(1)/2024-25, ದಿನಾಂಕ:18-09-2024ರಲ್ಲಿ ಅಧಿಸೂಚನೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ಆದರೆ ಪ್ರಸ್ತುತ ನೇಮಕಾತಿ ಪ್ರಾಧಿಕಾರದವರು ದಿನಾಂಕ:29-11-2024ರ ಪತ್ರದಲ್ಲಿ ಹಾಗೂ ದಿನಾಂಕ: 17-01-2025ರಂದು 'KPSC Udyoga' ತಂತ್ರಾಂಶದ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸುತ್ತಾ, ಈಗಾಗಲೇ ದಿನಾಂಕ:18-09-2024ರಂದು ಅಧಿಸೂಚಿಸಲಾಗಿರುವ ಉಳಿಕೆ ಮೂಲ ವೃಂದದ 30 ಹುದ್ದೆಗಳಲ್ಲಿ 29 ಹುದ್ದೆಗಳಿಗೆ ಮುಕ್ತ ಸ್ಪರ್ಧೆ ಅಭ್ಯರ್ಥಿಗಳನ್ನು ಹಾಗೂ 01 ಹುದ್ದೆಗೆ ಸೇವಾನಿರತ ಸ್ಪರ್ಧೆ ಅಭ್ಯರ್ಥಿಯನ್ನು ಭರ್ತಿ ಮಾಡುವಂತೆ ಕೋರಿದ್ದು, ಪರಿಷ್ಕರಿಸಲಾದ ಹುದ್ದೆಗಳ ವರ್ಗೀಕರಣ ಕೆಳಗಿನಂತಿದ್ದು, ಅದರಂತೆ ಓದಿಕೊಳ್ಳತಕ್ಕದ್ದು.

**ಮುಕ್ತ ಸ್ಪರ್ಧೆ (Open competition) ಹುದ್ದೆಗಳ ವರ್ಗೀಕರಣ ಪಟ್ಟಿ:**

ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೇಡ್-1) ಗ್ರೂಪ್ -ಎ

Assistant Executive Engineer (Grade-1) GROUP-A

**ಉಳಿಕೆ ಮೂಲ ವೃಂದ 29 ಹುದ್ದೆಗಳು**

| ಮೀಸಲಾತಿ ವರ್ಗ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಅಂ.ವಿ. | ಒಟ್ಟು |
|---|---|---|---|---|---|---|
| ಸಾಮಾನ್ಯ ವರ್ಗ | 2 | 5 | 4 | 1 | 1* | 13 |
| ಪರಿಶಿಷ್ಟ ಜಾತಿ | 1 | 2 | 1 | 0 | 1* | 5 |
| ಪರಿಶಿಷ್ಟ ಪಂಗಡ | 1 | 1 | 0 | 0 | 0 | 2 |
| ಪ್ರವರ್ಗ-1 | 1 | 0 | 0 | 0 | 0 | 1 |
| ಪ್ರವರ್ಗ-2ಎ | 1 | 2 | 1 | 0 | 1* | 5 |
| ಪ್ರವರ್ಗ-2ಬಿ | 1 | 0 | 0 | 0 | 0 | 1 |
| ಪ್ರವರ್ಗ-3ಎ | 1 | 0 | 0 | 0 | 0 | 1 |
| ಪ್ರವರ್ಗ-3ಬಿ | 1 | 0 | 0 | 0 | 0 | 1 |
| ಒಟ್ಟು | 9 | 10 | 6 | 1 | 3* | 29 |

**Note: * LV- Low Vision**

...2

**ಸೇವಾನಿರತ ಸ್ಪರ್ಧೆ (In-service competition) ಹುದ್ದೆಗಳ ವರ್ಗೀಕರಣ ಪಟ್ಟಿ**

ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೇಡ್-1) ಗ್ರೂಪ್ -ಎ

Assistant Executive Engineer (Grade-1) GROUP-A

**ಉಳಿಕೆ ಮೂಲ ವೃಂದ 01 ಹುದ್ದೆ**

| ಮೀಸಲಾತಿ ವರ್ಗ | ಇತರೆ | ಒಟ್ಟು |
|---|---|---|
| ಪರಿಶಿಷ್ಟ ಜಾತಿ | 1 | 1 |
| ಒಟ್ಟು | 1 | 1 |

ಮುಂದುವರೆದು, ಅರ್ಹ ಸೇವಾನಿರತ ಸ್ಪರ್ಧೆ ಅಭ್ಯರ್ಥಿಗಳಿಗೆ ಅರ್ಜಿಯನ್ನು ಆಹ್ವಾನಿಸಿದ್ದು, ಸದರಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ದಿನಾಂಕ:20-01-2025 ರಿಂದ 03-02-2025ರವರೆಗೆ ಅವಕಾಶವನ್ನು ಕಲ್ಪಿಸಲಾಗಿದೆ.

**ಸೇವಾನಿರತ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ವಿಶೇಷ ಸೂಚನೆ:**

1. ಕರ್ನಾಟಕ ಲೋಕೋಪಯೋಗಿ ಎಂಜಿನಿಯರಿಂಗ್ ಸೇವೆಯಲ್ಲಿರುವ ಸೇವಾನಿರತ ಸ್ಪರ್ಧೆಯ ಅಭ್ಯರ್ಥಿಗಳಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೇಡ್-1) ಹುದ್ದೆಗೆ ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆ:-

   "Must be a holder of Degree in Civil Engineering or Construction Technology and Management or Building and Construction Technology or Civil Engineering and Planning or Civil Technology or Construction Technology or Construction Engineering and Management or Geomechanics and Structures or Structural and Foundation Engineering or Structural Engineering and Construction granted by a University established by law in India recognized by AICTE, New Delhi or a Diploma Certificate granted by the Institution of Engineers (India) that he has passed Parts A and B of the Associate Membership Examination of the Institution of Engineers (India) in Civil Engineering or Construction Technology and Management Engineering".

2. ಸೇವಾನಿರತ ಸ್ಪರ್ಧೆಯ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ (ಗ್ರೇಡ್ -1) ಅಥವಾ ಸಹಾಯಕ ಇಂಜಿನಿಯರ್ (ಗ್ರೇಡ್ -2) ಅಥವಾ ಕಿರಿಯ ಇಂಜಿನಿಯರ್ ಈ ಯಾವುದೇ ಕೇಡರ್ ಗಳಲ್ಲಿ ಸಲ್ಲಿಸಿದ ಸೇವೆಯು ಕನಿಷ್ಠ ಐದು ವರ್ಷಗಳ ಸೇವೆಗಿಂತ ಕಡಿಮೆ ಇರತಕ್ಕದ್ದಲ್ಲ.
3. ಸೇವಾನಿರತ ಸ್ಪರ್ಧೆ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸಿರುವುದಿಲ್ಲ.
4. ಸೇವಾನಿರತ ಸ್ಪರ್ಧೆ ಅಭ್ಯರ್ಥಿಗಳಿಂದ ಮತ್ತು ಮುಕ್ತ ಸ್ಪರ್ಧೆ ಅಭ್ಯರ್ಥಿಗಳಿಂದ ತುಂಬಲಾಗುವ ಹುದ್ದೆಗಳಿಗೆ ಒಂದೇ ಪರೀಕ್ಷೆಯನ್ನು ನಡೆಸಲಾಗುವುದು.
5. ಉಲ್ಲೇಖಿತ ಅಧಿಸೂಚನೆಯಲ್ಲಿ ನಮೂದಿಸಲಾಗಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೇಡ್-1) ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳು, ವೇತನ ಶ್ರೇಣಿ, ಅರ್ಜಿ ಸಲ್ಲಿಸುವ ವಿಶೇಷ ಸೂಚನೆಗಳು, ಶುಲ್ಕ, ಅರ್ಹತಾ ಷರತ್ತುಗಳು, ನೇಮಕಾತಿ ವಿಧಾನ, ಲಿಖಿತ ಪರೀಕ್ಷೆ, ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಪಠ್ಯಕ್ರಮ, ಮೀಸಲಾತಿ /ಇತರೆ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಪ್ರಮುಖ ಸೂಚನೆಗಳು ಯಥಾವತ್ತಾಗಿ ಅನ್ವಯಿಸುತ್ತವೆ.

…3

**ಸೂಚನೆ:-**

1. ಸೇವಾನಿರತ ಸ್ಪರ್ಧೆ ಅಭ್ಯರ್ಥಿಗಳು ಈಗಾಗಲೇ "ಕೆ.ಪಿ.ಎಸ್.ಸಿ. ಉದ್ಯೋಗ" ಸಾಫ್ಟ್‌ವೇರ್ ನಲ್ಲಿ (https://kpsconline.karnataka.gov.in) OTRಅನ್ನು ರಚಿಸಿದ್ದರೆ, ಅವರು ನೇರವಾಗಿ ಲಾಗ್ ಇನ್ ಆಗುವ ಮೂಲಕ ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ಈ ಮೊದಲು OTRಅನ್ನು ರಚಿಸಿರದಿದ್ದರೆ ಅವರು "ಕೆ.ಪಿ.ಎಸ್.ಸಿ. ಉದ್ಯೋಗ" ಸಾಫ್ಟ್ ವೇರ್ ನಲ್ಲಿ OTRಅನ್ನು ರಚಿಸಿ, ನಂತರ ಅರ್ಜಿ ಸಲ್ಲಿಸಬಹುದು.
2. OTRನಲ್ಲಿನ Reservation details tabನಲ್ಲಿ 8ನೇ ಕ್ರಮ ಸಂಖ್ಯೆ (Are you Government Employee)ಯನ್ನು ಅಭ್ಯರ್ಥಿಗಳು ಸಂಪೂರ್ಣವಾಗಿ ಭರ್ತಿ ಮಾಡತಕ್ಕದ್ದು.
3. OTRನಲ್ಲಿನ Experience details tabನಲ್ಲಿ Work Experienceಅನ್ನು Yes ಎಂದು select ಮಾಡಿದ ನಂತರ ಅಭ್ಯರ್ಥಿಗಳು ಸಂಪೂರ್ಣವಾಗಿ ಭರ್ತಿ ಮಾಡತಕ್ಕದ್ದು ಹಾಗೂ Experience type tabನಲ್ಲಿ PWD (AE) Grade-I, PWD (AE) Grade-II ಮತ್ತು PWD (JE)ಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ.
4. ಅಭ್ಯರ್ಥಿಗಳು ಅಧಿಸೂಚನೆಗೆ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ನಂತರ QR Code ಇರುವ ಈ ಕೆಳಕಂಡ ಅಂಶಗಳನ್ನು ಒಳಗೊಂಡ ಸ್ವೀಕೃತಿ ನೀಡಲಾಗುವುದು.
   - Application submitted
   - Payment done
   - Application is accepted

   ಮೇಲ್ಕಂಡ ಅಂಶಗಳನ್ನೊಳಗೊಂಡ ಸ್ವೀಕೃತಿಯನ್ನು ಪಡೆದ ನಂತರವೇ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಅರ್ಥೈಸಿಕೊಳ್ಳುವುದು.
5. ಸ್ವೀಕೃತವಾದ ಅರ್ಜಿಯ ಪ್ರಿವ್ಯೂನಲ್ಲಿನ QR Code ಅನ್ನು scan ಮಾಡಿದಲ್ಲಿ ಅಭ್ಯರ್ಥಿಯ ಹೆಸರು, ಅರ್ಜಿ ಸಂಖ್ಯೆ, ಅಧಿಸೂಚನೆ ಸಂಖ್ಯೆ ಮತ್ತು ಅರ್ಜಿ ಸಲ್ಲಿಸಿದ ದಿನಾಂಕಗಳ ಮಾಹಿತಿ ಪಡೆಯಬಹುದು.
6. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
7. ಸಹಾಯವಾಣಿ ಸಂಖ್ಯೆ: ಅರ್ಜಿ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ತೊಂದರೆಗಳು ಎದುರಾದಲ್ಲಿ ಅಭ್ಯರ್ಥಿಗಳು ಈ ಕೆಳಕಂಡ HELP LINE ನಂಬರ್ ಅನ್ನುಸಂಪರ್ಕಿಸಲು ಸೂಚಿಸಿದೆ.
   HELP LINE NO:080-30574957 / 30574901
8. **ಸೇವಾನಿರತ ಅಭ್ಯರ್ಥಿಗಳು ಈಗಾಗಲೇ ಅರ್ಜಿ ಸಲ್ಲಿಸಿದಲ್ಲಿ, ಪುನಃ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.**
9. ಉಲ್ಲೇಖಿತ ಅಧಿಸೂಚನೆಯಲ್ಲಿನ ಕ್ರಮ ಸಂಖ್ಯೆ 07ರಲ್ಲಿನ ವಿಶೇಷ ಸೂಚನೆಯ ಕ್ರಮ ಸಂಖ್ಯೆ 02ರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಇರುತ್ತವೆ. ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡಿ ಅರ್ಥೈಸಿಕೊಳ್ಳುವುದು ಎಂದು ನಮೂದಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಗಳು 2018ರಲ್ಲಿ "ಅಭ್ಯರ್ಥಿಗಳು ಕನ್ನಡ ಭಾಷಾ ಪತ್ರಿಕೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಶ್ನೆ ಪತ್ರಿಕೆಗಳಿಗೆ ಆಂಗ್ಲ ಭಾಷೆಯಲ್ಲಿಯೇ ಉತ್ತರಿಸಬೇಕು" ಎಂದಿರುವುದರಿಂದ ಸದರಿ ಪರೀಕ್ಷೆಗೆ ಕನ್ನಡ ಭಾಷಾ ಪತ್ರಿಕೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಶ್ನೆ ಪತ್ರಿಕೆಗಳು ಆಂಗ್ಲ ಭಾಷೆಯಲ್ಲಿ ಇರುತ್ತವೆ ಎಂದು ಓದಿಕೊಳ್ಳತಕ್ಕದ್ದು.

ಸಹಿ/-

ಕಾರ್ಯದರ್ಶಿ,

ಕರ್ನಾಟಕ ಲೋಕಸೇವಾ ಆಯೋಗ.